ಸಾಕ್ಷಿಯನ್ನು ದಿನಾಂಕಃ 22/02/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ನಂ.5 ರಿಂದ 7 ಪರ ವಕೀಲರಿಂದಃ**

ಪ್ರತಿವಾದಿ ನಂ.5 ರವರು ಬಸವರಾಜ ರವರ 2 ನೇ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಮತ್ತು ಬಸವರಾಜ ರವರ ದಾಂಪತ್ಯದ ಸಂಬಂಧದ ಫಲವಾಗಿ ಪ್ರತಿವಾದಿ ನಂ.6 ಮತ್ತು 7 ಜನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಬಸವರಾಜ ರವರು ಹೈಸ್ಕೂಲ್ ನಲ್ಲಿ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಅವರು ಶಿಕ್ಷಕರಾಗಿ ಕರ್ತವ್ಯದಲ್ಲಿ ಇದ್ದಾಗ ತೀರಿಕೊಂಡಿದ್ದಾರೆ ಎಂದರೆ ಸರಿ. 5 ರಿಂದ 7 ನೇ ಪ್ರತಿವಾದಿ ನಿಮಗೆ ಯಾವ ರೀತಿ ಬಸವರಾಜ ರವರ ಆಸ್ತಿ ಮತ್ತು ಸರ್ಕಾರಿ ಸೌಲಭ್ಯಗಳಲ್ಲಿ ಹಕ್ಕು ಇದೆಯೋ ಅವರಿಗೂ ಸಹ ಹಕ್ಕು ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.8 ರವರು ಬಸವರಾಜ ರವರ ಹೆಂಡತಿ ಅಲ್ಲ ಎಂದರೆ ಸರಿ. ಪ್ರತಿವಾದಿ ನಂ.9 ಮತ್ತು 10 ಬಸವರಾಜ ರವರ ಮಕ್ಕಳು ಅಲ್ಲ ಎಂದರೆ ಸರಿ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

**8 ರಿಂದ 10 ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರನ್ನು ನ್ಯಾಯಾಲಯದಲ್ಲಿ ಕೂಗಿ ಕರೆಸಲಾಗಿ ಗೈರು ಹಾಜರಿದ್ದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
22.02.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**

ಸಾಕ್ಷಿಯನ್ನು ದಿನಾಂಕಃ 22/02/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ನಂ.5 ರಿಂದ 7 ಪರ ವಕೀಲರಿಂದಃ**

ಪ್ರತಿವಾದಿ ನಂ.5 ಮತ್ತು ಬಸವರಾಜ ಕಪ್ಪಲಿ ಇವರು ಮದುವೆ ಆದ ಬಗ್ಗೆ ನಿಮಗೆ ಗೊತ್ತಿರಲಿಲ್ಲ ಎಂದರೆ ಸರಿ. ನೀವು 2 ನೇ ದಿವಾಣಿ ನ್ಯಾಯಾಲಯ ಗದಗದಲ್ಲಿ ಬಸವರಾಜ ವಿರುದ್ಧ ಜೀವನಾಂಶ ಕೋರಿ ಪ್ರಕರಣ ದಾಖಲಿಸಿದಾಗ 5 ನೇ ಪ್ರತಿವಾದಿ ಬಸವರಾಜ ರವರ ಹೆಂಡತಿ ಎಂದು ಗೊತ್ತಾಯಿತು ಎಂದರೆ ಸರಿ. 5 ನೇ ಪ್ರತಿವಾದಿ ಮತ್ತು ಬಸವರಾಜ ರವರ ದಾಂಪತ್ಯದ ಸಂಬಂಧದ ಫಲವಾಗಿ ಪ್ರತಿವಾದಿ ನಂ.6 ಮತ್ತು 7 ಜನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 5 ರಿಂದ 7 ನೇ ಪ್ರತಿವಾದಿ ನಿಮಗೆ ಯಾವ ರೀತಿ ಬಸವರಾಜ ರವರ ಆಸ್ತಿ ಮತ್ತು ಸರ್ಕಾರಿ ಸೌಲಭ್ಯಗಳಲ್ಲಿ ಹಕ್ಕು ಇದೆಯೋ ಅವರಿಗೂ ಸಹ ಹಕ್ಕು ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.8 ರವರು ಬಸವರಾಜ ರವರ ಹೆಂಡತಿ ಅಲ್ಲ ಎಂದರೆ ಸರಿ. ಪ್ರತಿವಾದಿ ನಂ.9 ಮತ್ತು 10 ಬಸವರಾಜ ರವರ ಮಕ್ಕಳು ಅಲ್ಲ ಎಂದರೆ ಸರಿ. ವಾದಿ ನಂ.2 ಮತ್ತು 3 ನಿಮ್ಮ ಮತ್ತು ಬಸವರಾಜ ರವರ ಸಂಸಾರದ ಫಲವಾಗಿ ಹುಟ್ಟಿದ್ದ ಮಕ್ಕಳು ಎಂದರೆ ಸರಿ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

**8 ರಿಂದ 10 ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರನ್ನು ನ್ಯಾಯಾಲಯದಲ್ಲಿ ಕೂಗಿ ಕರೆಸಲಾಗಿ ಗೈರು ಹಾಜರಿದ್ದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
22.02.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**